ಸೊಂದಲಗೆರೆ ಲಕ್ಷ್ಮೀಪತಿ ಕಾದಂಬರಿ ಮತ್ತು ವೈಜ್ಞಾನಿಕ ಬರವಣಿಗೆಯಲ್ಲಿ ನಿರಂತರ ತೊಡಗಿಸಿಕೊಂಡವರು. ಅನುವಾದ ಅವರು ತೊಡಗಿಕೊಂಡಿರುವ ಮತ್ತೊಂದು ಪ್ರಕಾರ. ಓದುವ ಹವ್ಯಾಸ ಬೆಳೆಯಬೇಕು ಎಂಬ ದೃಷ್ಟಿಯಿಂದ ಹುಟ್ಟೂರಲ್ಲಿ ಮತ್ತು ಬೆಂಗಳೂರಲ್ಲಿ ಗ್ರಂಥಾಲಯಗಳನ್ನು ಕಟ್ಟಿಸಿದ್ದಾರೆ. ಕರ್ನಾಟಕ ಸಚಿವಾಲಯ ಸೇವೆಯಿಂದ ನಿವೃತ್ತರಾದ ಬಳಿಕ ಅಧ್ಯಯನ, ಬರವಣಿಗೆಯಲ್ಲಿ ಪೂರ್ಣಕಾಲಿಕವಾಗಿ ತೊಡಗಿಸಿಕೊಂಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ನಿರತರಾಗಿದ್ದೇವೆ ಎಂಬುದೇ ಭಾರಿ ಅನ್ಯಾಯ. ಇಡೀ ವಿಶ್ವ ಆ ಬೃಹನ್ ನಿಯಾಮಕನೋರ್ವನ ಸೃಷ್ಟಿ. ಆತನ ಬೆಳಕೇ ಪ್ರತಿಯೊಂದು ಸೃಷ್ಟಿಯನ್ನು ಬೆಳಗಿಸುತ್ತದೆ. ಈ ಭೌತಿಕ ರೂಪ ಮಾತ್ರ ನಮ್ಮನ್ನು ಪರಸ್ಪರ ಪ್ರತ್ಯೇಕಿಸುತ್ತದೆ. ವಾಸ್ತವವಾಗಿ, ನಾವೆಲ್ಲರೂ ಒಂದೇ. ಸೂರ್ಯನ ಬೆಳಕು ಬೇರೆ ಬೇರೆ ಮನೆಗಳಿಗೆ ಹೋದಾಗ ಹೇಗೆ ಭಿನ್ನವಾಗುವುದಿಲ್ಲವೋ ಹಾಗೆಯೇ ದೇವರ ಮಹಾನ್ ಚೇತನವು ವಿವಿಧ ಜೀವಿಗಳನ್ನು ಪ್ರವೇಶಿಸಿದಾಗ ಅದು ವಿಭಿನ್ನಗೊಳ್ಳದು.'

ಈ ತಾರ್ಕಿಕ ಸುರಿಮಳೆ ವೃಂದಳ ಶುಷ್ಕ ಹೃದಯವನ್ನು ತುಂಬಿ ಹರಿಯಿತು. ಅವಳು ನನ್ನ ಮಾತನ್ನು ತನ್ಮಯಳಾಗಿ ಆಲಿಸಿದಳು. ನಾನ್ಯಾವಾಗ ಮೌನವಹಿಸಿದೆನೋ, ಆಗವಳು ಭಕ್ತಿಭಾವದಲ್ಲಿ ನನ್ನೆಡೆ ನೋಡುತ್ತಾ ರೋಧಿಸಲು ಪ್ರಾರಂಭಿಸಿದಳು.

* *

**ಪತ್ನಿ**

'ನನ್ನ ಪತಿ ನನಗೆ ಯುಕ್ತಾಯುಕ್ತಾ ಪರಿಜ್ಞಾನವನ್ನು ತಿಳಿಸಿಕೊಟ್ಟರು. ನನ್ನಲ್ಲಿ ಜ್ಞಾನೋದಯ ಮೂಡಿಸಿ ಮನಸ್ಸನ್ನು ಜಾಗೃತಗೊಳಿಸಿದರು. ಈವರೆಗೆ ನಾನು ಕೂಪಮಂಡೂಕಳಂತಿದ್ದೆ. ಅವರ ಬೋಧನೆ ನನ್ನನ್ನು ಮೇಲೆತ್ತಿತು. ಅದು ನನ್ನನ್ನು ಪರ್ವತದ ವಿಕಿರಣ ಶಿಖರಕ್ಕೆ ಏರಿಸಿತು. ನಾನು ನನ್ನ ಉನ್ನತ ಕುಲೀನ ಮನೆತನದ ಆಲೋಚನಾ ಮಾರ್ಗಗಳಿಂದ, ಒಣ ಹೆಮ್ಮೆಯಿಂದ, ನನ್ನ ಜಾತಿಯೇ ಪರಿಶುದ್ಧವೆಂಬ ಭ್ರಮೆಯಿಂದ ನನ್ನ ದುರಹಂಕಾರದಿಂದ ಹಲವಾರು ವ್ಯಕ್ತಿಗಳನ್ನು ಅಗೌರವಿಸಿರುವೆ! ಓ ತಂದೆ, ನನ್ನನ್ನು ಕ್ಷಮಿಸು, ನನ್ನಲ್ಲಿರುವ ಹೃದಯ ಶೂನ್ಯ ಮಾತುಗಳನ್ನು ಕ್ಷಮಿಸು. ಈ ಮೌಢ್ಯದಿಂದಾಗಿ ಯಾರ ಪಾದಪೂಜೆ ಮಾಡಬೇಕಿತ್ತು ಅವರಿಗೆ ಅನುಚಿತಗಳನ್ನು ಆಡಿರುವೆ. ನಾನವರಿಗೆ ತೋರಿದ ಅಗೌರವವನ್ನು ಕ್ಷಮಿಸು ತಂದೆ!'

ಅವರ ಈ ಅಮರ ಸಂದೇಶವನ್ನು ಕೇಳಿದಾಗಿನಿಂದ, ನನ್ನ ಹೃದಯವು ತುಂಬಾ ಕಟ್ಟಲೊಮೆಯಿಂದ ತುಂಬಿ ಬಂದು ನನ್ನ ಆತ್ಮದಲ್ಲಿ ಅನೇಕ ಸದಭಿಪ್ರಾಯಗಳು ಮೂಡುತ್ತಿವೆ. ನೆನ್ನೆ, ದೋಬಿ ಹೆಂಗ್ಸು ಅರಿವೆಗಳನ್ನು ತಂದಳು. ಅವಳಿಗೆ ತಲೆನೋವಿತ್ತು. ಈ ಹಿಂದೆ, ನಾನವಳಿಗೆ ಬಾಯಿಮಾತಿನ ಉಪಚಾರದ ಮಾತುಗಳನ್ನಾಡಿ ಸಾಗಾಕುತ್ತಿದ್ದೆ. ಆಗೆಲ್ಲ ಕೆಲಸದವಳಿಗೆ ಆಕೆಗೆ ಒಂದಿಷ್ಟು ಎಣ್ಣೆ ಕೊಡು ಎಂದಷ್ಟೇ ಹೇಳುತ್ತಿದ್ದೆ, ಆದರೆ ನೆನ್ನೆ ನಾನು ಅಸ್ತವ್ಯಸ್ತ ಸ್ಥಿತಿಗೇರಿದ್ದೆ. ಆಕೆ ನನ್ನ ಖಾಸಾ ಸೋದರಿ ಎಂಬಂತೆ ಅನಿಸಿತು ನನಗೆ. ನನ್ನ ಪಕ್ಕ ಆಕೆಯನ್ನು ಕೂರಿಸಿಕೊಂಡೆ. ಗಂಟೆಯೊಂದರ ತನಕ ಅವಳ ತಲೆಗೆ ಎಣ್ಣೆ ಒತ್ತಿ ತಿಕ್ಕಿದೆ. ಹೀಗೆ ಮಾಡುವಾಗ ನನಗೆ ದಕ್ಕಿದ ಸ್ವರ್ಗೀಯ ಆನಂದವನ್ನು ವರ್ಣಿಸಲು ಪದಗಳೇ ಸಾಲದಾದವು. ನನ್ನ ಅಂತರಾತ್ಮವನ್ನು ಯಾವುದೋ ದಿವ್ಯಶಕ್ತಿ ಆಕರ್ಷಿಸಿ ಅವಳೆಡೆಗೆ ಸೆಳೆದೊಯ್ದಿತ್ತು. ನನ್ನ ನಾದಿನಿ ನನ್ನ ನಡೆ ನೋಡಿ ಮೂಗು ಮುರಿದಳು. ಆದರೆ, ನಾನೊಂದು ಚೂರೂ ಕ್ಯಾರೆ ಎನ್ನಲಿಲ್ಲ ಅವಳ ಕೊಂಕಿಗೆ.

ಇಂದು ಮುಂಜಾನೆ ವಿಪರೀತ ಚಳಿ ಇತ್ತು. ನನ್ನ ಕೈಕಾಲುಗಳು ಜೋಮು ಹಿಡಿದಿದ್ದವು. ಕೆಲಸದಾಳು ಗಡಗಡ ನಡುಗುತ್ತಿದ್ದಳು, ನಾನು ರಜಾಯಿ ಹೊದ್ದು ಅಗ್ಗಿಷ್ಟಿಕೆ ಮುಂದೆ ಕುಳಿತಿದ್ದೇನಾದರೂ ರಜಾಯಿಯಿಂದ ಮುಖ ಹೊರಗೆ ತೂರಿಸುವ ಭಾವನೆ ನನಗಾಗಲಿಲ್ಲ. ಆಕೆಯನ್ನು ನೋಡಿ ನನಗೆ ಮರುಕ ಹುಟ್ಟಿತು. ನನ್ನ ಸ್ವಾರ್ಥಿ ವರ್ತನೆಯಿಂದ ನನಗೇ ತಲೆತಗ್ಗಿಸುವಂತಾಯಿತು. ಅವಳಿಗೂ ನನಗೂ ಇರುವ ವ್ಯತ್ಯಾಸವಾದರೂ ಏನು! ಅದೇ ಬೆಳಕು ಅವಳ ಆತ್ಮದಲ್ಲಿಯೂ ಇದೆ. ಯಾಕೆ ಈ ಅನ್ಯಾಯ? ಇದು ಕೇವಲ ಸಂಪತ್ತಿನ ಭ್ರಮೆಯಿಂದಾಗಿ ನಮ್ಮ ನಡುವೆ ವ್ಯತ್ಯಾಸವನ್ನುಂಟು ಮಾಡಿದೆಯಾ? ನಾನು ಇದನ್ನು